ಅಸಲು ದಾವೆ ನಂಃ 68/2024 ಪಿ.ಡಬ್ಲ್ಯೂಃ1–ಯಶೋಧಾ ಸಂಗನಾಳ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28/11/2024 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ SP Pawar ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು , ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಕೆಲವೊಂದು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಈ ದಿನ ಹಾಜರು ಮಾಡುತ್ತಿದ್ದೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರತಿಸಬೇಕಾಗಿ ಪ್ರಾರ್ಥನೆ .

ವಾದಿಯ ದಾಖಲೆಗಳನ್ನು ಈ ಕೆಳಕಂಡತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಪಿಃ 1 | APMC ವಾರ್ಡ ಗಜೇಂದ್ರಗಡ ಸ್ವತ್ತಿನ ಸಂಖ್ಯೆ30–504–103 ಇದರಖಾತಾ ಎಕ್ಸಟ್ರಾಕ್ಟ |
| ನಿಪಿಃ 2 | ದಿನಾಂಕ 17/01/2022 ರಂದು ಆದಂತಹ ಮೂಲ ಖರೀದಿ ಪತ್ರ |
| ನಿಪಿಃ 3 | ದಿನಾಂಕ 04/08/2009 ರಂದು ಆದಂತಹ ಲೀಸ್ ಕಮ್ ಸೇಲ್ ಒಪ್ಪಂದ ಪತ್ರ |
| ನಿಪಿಃ 4 | ದಿನಾಂಕ 19/11/2022 ರಂದು ವಕೀಲರ ಮೂಲಕ ಕೊಟ್ಟಂತಹ ಲೀಗಲ್ ನೊಟೀಸ್ |
| ನಿಪಿಃ 5 ಮತ್ತು 6 | ಅಂಚೆ ರಸೀದಿ ಮತ್ತು ಅಂಚೆ ಸ್ವಿಕೃತಿ ಪತ್ರ |
| ನಿಪಿಃ 7 | ಪರಪ್ಪ ಇವರ ಮರಣ ಪ್ರಮಾಣ ಪತ್ರ |
| ನಿಪಿಃ 8 | ದಿನಾಂಕ 25/11/2020 ರ APMC ಯ ಠರಾವು ಪತ್ರ |
| ನಿಪಿಃ 9 | ದಿನಾಂಕ 02/09/2020 ರ APMC ಯ ಠರಾವು ಪತ್ರ |

ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಮುಂದುವರೆದ ಮುಖ್ಯವಿಚಾರಣೆಃ – ಕೋರಿಕೆಯ ಮೇರೆಗೆ ಮೂಂದುೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.